KARN320023752024

**2ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಕನಕಪುರ.**

**ಸಿಸಿ ಸಂಖ್ಯೆ: 1073-2024**

**ದಿನಾಂಕ: 28 ನೇ ಮಾರ್ಚ್ 2026**

ಉಪಸ್ಥಿತರುಃ ಶ್ರೀ ವಿನಯ ವಿಠಲ ಕುಂದಾಪುರ, ಬಿ.ಎ.ಎಲ್ ಎಲ್.ಎಲ್.ಬಿ

2ನೇ ಅಧಿಕ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.

ನ್ಯಾಯಾಧೀಶರು, ಕನಕಪುರ.

**ಫಿರ್ಯಾದುದಾರರು :** ಕನಕಪುರ ಗ್ರಾಮಾಂತರ ಪೊಲೀಸ್ ಠಾಣೆ, ಕನಕಪುರ

**(ಸರ್ಕಾರಿ ಸಹಾಯಕ ಅಭಿಯೋಜಕರವರಿಂದ)**

**ವಿರುದ್ಧ**

**ಆರೋಪಿತ** : ಪ್ರವೀಣ್. ಎಸ್ ಉಃ ಪ್ರವೀಣ್ ಕುಮಾರ್

ಬಿನ್ ಸಾವಂದಯ್ಯ,

ಸುಮಾರು 25 ವರ್ಷ ವಯಸ್ಸು,

ವಾಸಃ ಗಡಸನಹಳ್ಳಿ ಗ್ರಾಮ,

ಕಸಬಾ ಹೋಬಳಿ, ಕನಕಪುರ ತಾಲ್ಲೂಕು,

ರಾಮನಗರ ಜಿಲ್ಲೆ.

**(ಶ್ರೀ ಡಿ.ಆರ್.ಜೆ., ವಕೀಲರವರಿಂದ )**

| | | |
|---|---|---|
| 1 | ಘಟನೆ ನಡೆದ ದಿನಾಂಕ | : 29-04-2024 |
| 2 | ಘಟನೆ ವರದಿ ಮಾಡಿದ ದಿನಾಂಕ | : 16-05-2024 |
| 3 | ಪಿರ್ಯಾದುದಾರರ ಹೆಸರು | ನಾರಾಯಣ |
| 4 | ವಿಚಾರಣೆ ಪ್ರಾರಂಭವಾದ ದಿನಾಂಕ | : 20-03-2025 |
| 5 | ವಿಚಾರಣೆ ಮುಕ್ತಾಯವಾದ ದಿನಾಂಕ | : 10-10-2025 |
| 6 | ಆರೋಪಿಸಲ್ಪಟ್ಟ ಅಪರಾಧಗಳು | : ಬಾಲ್ಯ ವಿವಾಹ ಕಾಯ್ದೆ 2006 ಕಲಂ 9 ಹಾಗೂ ಭಾರತೀಯ ದಂಡ ಸಂಹಿತೆಯ ಕಲಂ 363 |
| 7 | ತೀರ್ಪು ಉದ್ಘೋಷಣೆ ಮಾಡಿದ ದಿನಾಂಕ | : 28-03-2026 |
| 8 | ನ್ಯಾಯಾಧೀಶರ ಅಭಿಪ್ರಾಯ | : ಆರೋಪಿಯನ್ನು ಅಪರಾಧಗಳಿಂದ ದೋಷ ಮುಕ್ತಗೊಳಿಸಿದೆ. |

**::ತೀರ್ಪು::**

ಆರಕ್ಷಕ ಉಪನಿರೀಕ್ಷಕರು, ಕನಕಪುರ ಗ್ರಾಮಾಂತರ ಪೊಲೀಸ್ ಠಾಣೆ ರವರು ಆರೋಪಿಯ ವಿರುದ್ಧ ಬಾಲ್ಯ ವಿವಾಹ ಕಾಯ್ದೆ 2006 ಕಲಂ 9 ಹಾಗೂ ಭಾರತೀಯ ದಂಡ ಸಂಹಿತೆಯ ಕಲಂ 363 ರ ಅಪರಾಧಗಳಿಗೆ ದೋಷಾರೋಪಣ ಪತ್ರ ಸಲ್ಲಿಸಿರುತ್ತಾರೆ.

**2.** **ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತೆ ಇರುತ್ತದೆ:**

ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆ, ಕನಕಪುರ ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದಿನ ಗಡಸಹಳ್ಳಿ - ದೊಡ್ಡತಾಂಡ್ಯ ಗ್ರಾಮದ ಮುಖ್ಯ ರಸ್ತೆಯಲ್ಲಿ ದಿನಾಂಕಃ 29.04.2024 ರಂದು ಆರೋಪಿಯು ಸಂತ್ರಸ್ಥೆ ಚಾಸಾ-2 ರವರಿಗೆ 18 ವರ್ಷ ವಯಸ್ಸು ಆಗಿಲ್ಲವೆಂದು ತಿಳಿದಿದ್ದರೂ ಸಹ ತನ್ನ ಕಾರಿನ ಹಿಂಬದಿ ಸೀಟಿನಲ್ಲಿ ಕೂರಿಸಿಕೊಂಡು ಚನ್ನಪಟ್ಟಣ ತಾಲ್ಲೂಕಿನ ಲಾಳಘಟ್ಟದ ಬಳಿ ಇರುವ ಶ್ರೀ ಮಾಸ್ತಮ್ಮ ದೇವಸ್ಥಾನಕ್ಕೆ ಕರೆದುಕೊಂಡು ಹೋಗಿ ತಾಳಿ ಕಟ್ಟಿ ಮದುವೆ ಮಾಡಿಕೊಂಡಿರುತ್ತಾರೆ ಎಂದು ಆರೋಪಿಯ ವಿರುದ್ಧ ಬಾಲ್ಯ ವಿವಾಹ ಕಾಯ್ದೆ 2006 ಕಲಂ 9 ಹಾಗೂ ಭಾರತೀಯ ದಂಡ ಸಂಹಿತೆಯ ಕಲಂ 363 ರ ಅಪರಾಧಗಳಿಗೆ ದೋಷಾರೋಪಣ ಪತ್ರ ಸಲ್ಲಿಸಿರುತ್ತಾರೆ.

**3.** ಆರೋಪಿಯು ಜಾಮೀನಿನ ಮೇಲೆ ಬಿಡುಗಡೆ ಆಗಿದ್ದು, ಅವರಿಗೆ ದಂಡ ಪ್ರಕ್ರಿಯ ಸಂಹಿತೆ ಕಲಂ 207ರ ಅಡಿಯಲ್ಲಿ ಅಭಿಯೋಜನೆಯ ಪರ ದಾಖಲೆಗಳನ್ನು ಒದಗಿಸಲಾಗಿರುತ್ತದೆ.

**4.** ಬಾಲ್ಯ ವಿವಾಹ ಕಾಯ್ದೆ 2006 ಕಲಂ 9 ಹಾಗೂ ಭಾರತೀಯ ದಂಡ ಸಂಹಿತೆಯ ಕಲಂ 363 ರಡಿಯಲ್ಲಿನ ಅಪರಾಧಗಳಿಗೆ ದೋಷಾರೋಪಣೆಯನ್ನು ರಚಿಸಿ, ಆರೋಪಿಗೆ ಓದಿ ಹೇಳಿದ್ದು ಅವರು ಅದನ್ನು ಅಲ್ಲಗಳೆದಿದ್ದರಿಂದ ವಿಚಾರಣೆಗೆ ಮುಂದೂಡಲಾಯಿತು.

**5.** ಅಭಿಯೋಜನೆಯು ದೋಷಾರೋಪಣೆ ಪಟ್ಟಿಯ 14 ಸಾಕ್ಷಿದಾರರಲ್ಲಿ, 9 ಸಾಕ್ಷಿದಾರರನ್ನು ಮಾತ್ರ ಪ್ರಾಸಾ-1 ರಿಂದ ಪ್ರಾಸಾ-9 ಎಂಬುದಾಗಿ ವಿಚಾರಣೆಗೊಳಪಡಿಸಿರುತ್ತದೆ ಹಾಗೂ ವಿಚಾರಣೆ ಮಾಡಿ ದಾಖಲೆಗಳನ್ನು ನಿಶಾನೆ.ಪಿ-1 ರಿಂದ ನಿಶಾನೆ.ಪಿ-10 ಎಂದು ಗುರುತಿಸಿರುತ್ತಾರೆ.

**6.** ದಂಡ ಪ್ರಕ್ರಿಯಾ ಸಂಹಿತೆ ಕಲಂ 313ರಡಿಯಲ್ಲಿನ ಆರೋಪಿಯ ಹೇಳಿಕೆಯನ್ನು ಪಡೆದುಕೊಳ್ಳಲಾಯಿತು. ಆರೋಪಿಯು ತಮ್ಮ ಪ್ರತಿರಕ್ಷೆಯಲ್ಲಿ ಯಾವುದೇ ಸಾಕ್ಷಿ ವಿಚಾರಣೆ ಮಾಡಿರುವುದಿಲ್ಲ ಹಾಗೂ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ.

**7.** ವಾದವನ್ನು ಆಲಿಸಲಾಯಿತು, ದಾಖಲೆಗಳನ್ನು ಪರಿಶೀಲಿಸಲಾಯಿತು.

**8.** ಅಭಿಯೋಜಕರು ಹಾಜರು ಪಡಿಸಿದ ಸಾಕ್ಷ್ಯಗಳ ಹೇಳಿಕೆಗಳನ್ನು, ನಿಶಾನೆಯಾಗಿ ಗುರುತಿಸಿಕೊಂಡಿರುವ ದಾಖಲಾತಿಗಳನ್ನು ಮತ್ತು ಉಭಯ ವಕೀಲರು ಮಂಡಿಸಿದ ವಾದ ವಿವಾದದ ಮೇರೆಗೆ ಈ ಕೆಳಕಂಡ ಅಂಶಗಳು ನನ್ನ ಗಮನಕ್ಕೆ ಬಂದಿರುತ್ತವೆ.

1. ಕನಕಪುರ ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದು ಗಡಸಹಳ್ಳಿ ದೊಡ್ಡತಾಂಡ್ಯ ಗ್ರಾಮದ ಮುಖ್ಯರಸ್ತೆಯಲ್ಲಿ ದಿನಾಂಕಃ 29.04.2024 ರಂದು ಆರೋಪಿಯಾದ ನೀವು ಸಂತ್ರಸ್ಥೆಯಾದ ಚಾಸಾ-2 ರವರಿಗೆ 18 ವರ್ಷ ವಯಸ್ಸು ಆಗಿಲ್ಲವೆಂದು ತಿಳಿದಿದ್ದರೂ ಸಹ ಅವರನ್ನು ಅಪಹರಣ ಮಾಡಿ ನಿಮ್ಮ ಕಾರಿನ ಹಿಂಬದಿ ಸೀಟಿನಲ್ಲಿ ಕೂರಿಸಿಕೊಂಡು ಚನ್ನಪಟ್ಟಣ ತಾಲ್ಲೂಕಿನ ಲಾಳಘಟ್ಟದ ಬಳಿ ಇರುವ ಶ್ರೀ ಮಾಸ್ತಮ್ಮ ದೇವಸ್ಥಾನಕ್ಕೆ ಕರೆದುಕೊಂಡು ಹೋಗಿ ತಾಳಿ ಕಟ್ಟಿ ಮದುವೆ ಮಾಡಿಕೊಂಡಿದ್ದು, ಆ ಮೂಲಕ ಆರೋಪಿಯ ವಿರುದ್ಧ ಬಾಲ್ಯ ವಿವಾಹ ಕಾಯ್ದೆ 2006 ಕಲಂ 9 ಹಾಗೂ ಭಾರತೀಯ ದಂಡ ಸಂಹಿತೆಯ ಕಲಂ 363 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸುತ್ತದೆಯೇ?

2. ಯಾವ ಆದೇಶ ?

**9.** ಈ ಮೇಲ್ಕಂಡ ಅಂಶಗಳಿಗೆ ನ್ಯಾಯಾಲಯದ ಉತ್ತರ ಈ ಕೆಳಗಿನಂತಿದೆಃ

**ಅಂಶ-1 : ನಕಾರಾತ್ಮಕವಾಗಿ**

**ಅಂಶ-2 : ಅಂತಿಮ ಆದೇಶ**

## ಕಾರಣಗಳು

**10.** **ಅಂಶ-1:-** ಅಭಿಯೋಜನೆ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆ, ಕನಕಪುರ ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದಿನ ಗಡಸಹಳ್ಳಿ - ದೊಡ್ಡತಾಂಡ್ಯ ಗ್ರಾಮದ ಮುಖ್ಯ ರಸ್ತೆಯಲ್ಲಿ ದಿನಾಂಕಃ 29.04.2024 ರಂದು ಆರೋಪಿಯು ಸಂತ್ರಸ್ಥೆ ಚಾಸಾ-2 ರವರಿಗೆ 18 ವರ್ಷ ವಯಸ್ಸು ಆಗಿಲ್ಲವೆಂದು ತಿಳಿದಿದ್ದರೂ ಸಹ ತನ್ನ ಕಾರಿನ ಹಿಂಬದಿ ಸೀಟಿನಲ್ಲಿ ಕೂರಿಸಿಕೊಂಡು ಚನ್ನಪಟ್ಟಣ ತಾಲ್ಲೂಕಿನ ಲಾಳಘಟ್ಟದ ಬಳಿ ಇರುವ ಶ್ರೀ ಮಾಸ್ತಮ್ಮ ದೇವಸ್ಥಾನಕ್ಕೆ ಕರೆದುಕೊಂಡು ಹೋಗಿ ತಾಳಿ ಕಟ್ಟಿ ಮದುವೆ ಮಾಡಿಕೊಂಡಿರುತ್ತಾರೆ ಎಂದು ಆರೋಪಿಯ ವಿರುದ್ಧ ಬಾಲ್ಯ ವಿವಾಹ ಕಾಯ್ದೆ 2006 ಕಲಂ 9 ಹಾಗೂ ಭಾರತೀಯ ದಂಡ ಸಂಹಿತೆಯ ಕಲಂ 363 ರ ಅಪರಾಧಗಳಿಗೆ ದೋಷಾರೋಪಣ ಪತ್ರ ಸಲ್ಲಿಸಿರುತ್ತಾರೆ.

**11.** ದೋಷಾರೋಪಣೆ ಪಟ್ಟಿಯಲ್ಲಿ ಹೆಸರಿಸಲಾದ ಒಟ್ಟು 14 ಸಾಕ್ಷಿದಾರರಲ್ಲಿ, ಅಭಿಯೋಜನೆಯು ಪ್ರಕರಣವನ್ನು ರುಜುವಾತು ಪಡಿಸಲು ತನ್ನ ಪರವಾಗಿ ಒಟ್ಟು 9 ಸಾಕ್ಷಿದಾರರನ್ನು ಮಾತ್ರ ಪ್ರಾ.ಸಾ-1 ರಿಂದ ಪ್ರಾ.ಸಾ-9 ಎಂದು ವಿಚಾರಣೆಗೆ ಒಳಪಡಿಸಿರುತ್ತದೆ. ಅವರುಗಳಲ್ಲಿ ಪ್ರಾಸಾ-1 ಫಿರ್ಯಾದುದಾರರಾಗಿರುತ್ತಾರೆ, ಪ್ರಾಸಾ-2 ಸಂತ್ರಸ್ಥೆಯಾಗಿರುತ್ತಾರೆ,

ಪ್ರಾಸಾ-3 ಮತ್ತು ಪ್ರಾಸಾ-4 ಇತರೆ ಸಾಕ್ಷಿದಾರರಾಗಿರುತ್ತಾರೆ, ಪ್ರಾಸಾ-5 ಮತ್ತು ಪ್ರಾಸಾ-6, ಪ್ರಾಸಾ-7 ಪ್ರಕರಣ ವರದಿ ಮಾಡಿದವರಾಗಿರುತ್ತಾರೆ, ಪ್ರಾಸಾ-8 ಸಂತ್ರಸ್ಥೆಯನ್ನು ಕುರಿತು ಮಾಹಿತಿ ನೀಡಿದವರಾಗಿರುತ್ತಾರೆ ಹಾಗೂ ಪ್ರಾಸಾ-9 ತನಿಖಾಧಿಕಾರಿಯಾಗಿರುತ್ತಾರೆ. ಚಾಸಾ-3 ರಿಂದ ಚಾಸಾ-6 ಹಾಗೂ ಚಾಸಾ-14 ರವರಿಗೂ ನ್ಯಾಯಾಲಯದಿಂದ ಸಾಕಷ್ಟು ಬಾರಿ ಸಮನ್ಸ್ ಜಾರಿ ಮಾಡಿದ್ದರೂ ಸಹ ಸದರಿ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸುವಲ್ಲಿ ಅಭಿಯೋಜನೆಯು ವಿಫಲವಾಗಿರುತ್ತದೆ. ಆದುದರಿಂದ ನ್ಯಾಯಾಲಯವು ಚಾಸಾ-3 ರಿಂದ ಚಾಸಾ-6 ಹಾಗೂ ಚಾಸಾ-14 ರವರನ್ನು ವಿಚಾರಣೆಯಿಂದ ಕೈಬಿಡಲಾಗಿರುತ್ತದೆ.

**12.** ಪ್ರಾ.ಸಾ-1 ನಾರಾಯಣ ರವರು ದೂರುದಾರರಾಗಿರುತ್ತಾರೆ. ಸದರಿ ಸಾಕ್ಷಿದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ, ನನಗೆ ದಿನಾಂಕ 14.05.2024 ರಂದು Child Line ನಿಂದ ಬಾಲ್ಯ ವಿವಾಹ ಆಗಿರುವ ಬಗ್ಗೆ ಮಾಹಿತಿ ಬಂತು, ನನ್ನ Whatsapp ಗೆ ಮದುವೆ ಪೋಟೋ ಹಾಗೂ ಆಧಾರ್ ಕಾರ್ಡ್ , ಜನನ ಪ್ರಮಾಣ ಪತ್ರ ದಾಖಲೆಗಳನ್ನು Child line ರವರು ಕಳುಹಿಸಿದರು. ಮಾಹಿತಿ ಮೇರೆಗೆ ನಾವು ಗಡಸಹಳ್ಳಿಗೆ ಹೋದೆವು. Child line ರವರು ಒಂದು ವರದಿ ಮಾಡಿಕೊಂಡು ತಂದಿದ್ದರು. ಆ ವರದಿ ಹಾಗೂ ಮಕ್ಕಳ ಕಲ್ಯಾಣ ಸಮಿತಿಯವರು ನೀಡಿದ

ಮಾಹಿತಿಯ ಮೇರೆಗೆ ದೇವಿಕಾ ಎಂಬ ಅಪ್ರಾಪ್ತ ವಯಸ್ಸಿನ ಯುವತಿಯನ್ನು ಪ್ರವೀಣ್ ಎಂಬ ಯುವಕ ಮದುವೆ ಆಗಿರುವ ಬಗ್ಗೆ ನಾನು ಕನಕಪುರ ಗ್ರಾಮಾಂತರ ಠಾಣೆಯಲ್ಲಿ ದೂರನ್ನು ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

ಸದರಿ ಸಾಕ್ಷಿದಾರರನ್ನು ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಿದ್ದು, ಪಾಟೀ ಸವಾಲಿನಲ್ಲಿ,

"... ಮದುವೆಗೆ ಸಂಬಂಧಪಟ್ಟ ಹಾಗೆ ನನ್ನ Whatsapp ಗೆ ಪೋಟೋಗಳು ಬಂದಿದ್ದವು. ಅವುಗಳನ್ನು ಹಾಜರುಪಡಿಸಿದ್ದೇನೆ. ಮದುವೆಯಾಗಿದೆ ಎಂದು ಹೇಳಲಾದ ಹುಡುಗಿಯ ಹೇಳಿಕೆಯನ್ನು ನಾನು ಪಡೆದಿಲ್ಲ. ಯುವತಿಯನ್ನು ಮಕ್ಕಳ ಕಲ್ಯಾಣ ಸಮಿತಿಯವರು ತಮ್ಮ ಕಸ್ಟಡಿಗೆ ಪಡೆದಿದ್ದರು. ಯಾವುದೇ ಬಾಲ್ಯ ವಿವಾಹ ಆಗಿಲ್ಲ, ನಾನು ನಮ್ಮ ಇಲಾಖೆಯವರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎನ್ನುವುದನ್ನು ಅಲ್ಲಗಳೆದಿರುತ್ತಾರೆ. ..."

**13.** ಪ್ರಾ.ಸಾ-2 ದೇವಿಕಾ ರವರು ಸಂತ್ರಸ್ಥೆಯಾಗಿರುತ್ತಾರೆ. ಸದರಿ ಸಾಕ್ಷಿದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಆರೋಪಿ ಗೊತ್ತು, ಚಾಸಾ-1, 3 ರಿಂದ ಚಾಸಾ-5 ಗೊತ್ತಿಲ್ಲ, ಚಾಸಾ-7 ಮತ್ತು ಚಾಸಾ-8 ನನ್ನ ತಾಯಿ ತಂದೆ. ಚಾಸಾ-9 ರಿಂದ 11 ಗೊತ್ತಿಲ್ಲ. ಆರೋಪಿ ನನ್ನನ್ನು ತನ್ನ ಕಾರಿನಲ್ಲಿ ಕರೆದುಕೊಂಡು ಹೋಗಿ ಮದುವೆಯಾಗಿರುವುದಿಲ್ಲ. ಈ ಬಗ್ಗೆ ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ ಎಂದು ಸಾಕ್ಷ್ಯ ನುಡಿದಿದ್ದು, ತಮ್ಮ ದೂರಿನ ಅಂಶವನ್ನು ಅಲ್ಲಗಳೆದಿರುತ್ತಾರೆ.

ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಲು ಕೇಳಿಕೊಂಡು, ಪಾಟೀ ಸವಾಲಿಗೆ ಒಳ ಪಡಿಸಿರುತ್ತಾರೆ. ಪಾಟೀ ಸವಾಲಿನಲ್ಲಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಮದುವೆಯ ಬಗ್ಗೆ ಕೇಳಿರುತ್ತಾರೆ, ಅದಕ್ಕೆ ಸದರಿ ಸಾಕ್ಷಿದಾರರು ತನಗೆ ಆರೋಪಿಯೊಂದಿಗೆ ಮದುವೆ ಆಗಿಲ್ಲ ಎಂದು ಹಾಗೂ ತಮ್ಮ ಹೇಳಿಕೆಯನ್ನು ಅಲ್ಲಗಳೆದಿರುತ್ತಾರೆ. ಆದ್ದರಿಂದ ಸದರಿ ಸಾಕ್ಷಿದಾರರಿಂದ ಅಭಿಯೋಜನೆಗೆ ಯಾವುದೇ ಅನುಕೂಲವಾಗಿರುವುದಿಲ್ಲ.

**14.** ಪ್ರಾ.ಸಾ-3 ಶಿವಲಿಂಗಮ್ಮ ರವರು ಇತರೆ ಸಾಕ್ಷಿದಾರರಾಗಿರುತ್ತಾರೆ. ಸದರಿ ಸಾಕ್ಷಿದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಆರೋಪಿತ ಗೊತ್ತಿಲ್ಲ, ಚಾಸಾ-2 ನನ್ನ ಮಗಳು, ಚಾಸಾ-8 ನನ್ನ ಗಂಡ, ಚಾಸಾ-1, 3 ರಿಂದ ಚಾಸಾ-6, 9 ರಿಂದ ಚಾಸಾ-14 ಗೊತ್ತಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ನಾನು ಈ ಬಗ್ಗೆ ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ ಎಂದು ಸಾಕ್ಷ್ಯ ನುಡಿದಿದ್ದು, ತಮ್ಮ ದೂರಿನ ಅಂಶವನ್ನು ಅಲ್ಲಗಳೆದಿರುತ್ತಾರೆ. ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಲು ಕೇಳಿಕೊಂಡು, ಪಾಟೀ ಸವಾಲಿಗೆ ಒಳ ಪಡಿಸಿರುತ್ತಾರೆ. ಪಾಟೀ ಸವಾಲಿನಲ್ಲಿ

ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಮದುವೆಯ ಬಗ್ಗೆ ಕೇಳಿರುತ್ತಾರೆ, ಅದಕ್ಕೆ ಸದರಿ ಸಾಕ್ಷಿದಾರರು ತಮ್ಮ ಹೇಳಿಕೆಯನ್ನು ಅಲ್ಲಗಳೆದಿರುತ್ತಾರೆ. ಆದ್ದರಿಂದ ಸದರಿ ಸಾಕ್ಷಿದಾರರಿಂದ ಅಭಿಯೋಜನೆಗೆ ಯಾವುದೇ ಅನುಕೂಲವಾಗಿರುವುದಿಲ್ಲ.

**15.** ಪ್ರಾ.ಸಾ-4 ವೀರೇಗೌಡ ರವರು ಇತರೆ ಸಾಕ್ಷಿದಾರರಾಗಿರುತ್ತಾರೆ. ಸದರಿ ಸಾಕ್ಷಿದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಆರೋಪಿತ ಗೊತ್ತಿಲ್ಲ, ಚಾಸಾ-2 ನನ್ನ ಮಗಳು, ಚಾಸಾ-7 ನನ್ನ ಹೆಂಡತಿ, ಚಾಸಾ-1, 3 ರಿಂದ ಚಾಸಾ-6, 9 ರಿಂದ ಚಾಸಾ-14 ಗೊತ್ತಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ನಾನು ಈ ಬಗ್ಗೆ ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ ಎಂದು ಸಾಕ್ಷ್ಯ ನುಡಿದಿದ್ದು, ತಮ್ಮ ದೂರಿನ ಅಂಶವನ್ನು ಅಲ್ಲಗಳೆದಿರುತ್ತಾರೆ. ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಲು ಕೇಳಿಕೊಂಡು, ಪಾಟೀ ಸವಾಲಿಗೆ ಒಳ ಪಡಿಸಿರುತ್ತಾರೆ. ಪಾಟೀ ಸವಾಲಿನಲ್ಲಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಮದುವೆಯ ಬಗ್ಗೆ ಕೇಳಿರುತ್ತಾರೆ, ಅದಕ್ಕೆ ಸದರಿ ಸಾಕ್ಷಿದಾರರು ತಮ್ಮ ಹೇಳಿಕೆಯನ್ನು ಅಲ್ಲಗಳೆದಿರುತ್ತಾರೆ. ಆದ್ದರಿಂದ ಸದರಿ ಸಾಕ್ಷಿದಾರರಿಂದ ಅಭಿಯೋಜನೆಗೆ ಯಾವುದೇ ಅನುಕೂಲವಾಗಿರುವುದಿಲ್ಲ.

**16.** ಪ್ರಾ.ಸಾ-5 ರಘು ರವರು ಮಹಜರ್ ಸಾಕ್ಷಿದಾರರಾಗಿರುತ್ತಾರೆ. ಸದರಿ ಸಾಕ್ಷಿದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಆರೋಪಿತ ಗೊತ್ತಿಲ್ಲ, ಚಾಸಾ-1 ರಿಂದ ಚಾಸಾ-8, ಚಾಸಾ-10 ರಿಂದ ಚಾಸಾ-14 ಗೊತ್ತಿಲ್ಲ. ನಿಪಿ.5 ಮತ್ತು ನಿಪಿ.6 ಕ್ಕೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ನಿಪಿ.5 ಮತ್ತು ನಿಪಿ.6 ರಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಮಹಜರ್ ಕ್ರಮ ಜರುಗಿಸಿ ಯಾವುದೇ ವಸ್ತುಗಳನ್ನು ಅಮಾನತುಪಡಿಸಿಕೊಂಡಿಲ್ಲ ಎಂದು ಸಾಕ್ಷ್ಯ ನುಡಿದಿದ್ದು, ತಮ್ಮ ದೂರಿನ ಅಂಶವನ್ನು ಅಲ್ಲಗಳೆದಿರುತ್ತಾರೆ. ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಲು ಕೇಳಿಕೊಂಡು, ಪಾಟೀ ಸವಾಲಿಗೆ ಒಳ ಪಡಿಸಿರುತ್ತಾರೆ. ಪಾಟೀ ಸವಾಲಿನಲ್ಲಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಮಹಜರ್ ಬಗ್ಗೆ ಕೇಳಿರುತ್ತಾರೆ, ಅದಕ್ಕೆ ಸದರಿ ಸಾಕ್ಷಿದಾರರು ತಮ್ಮ ಹೇಳಿಕೆಯನ್ನು ಅಲ್ಲಗಳೆದಿರುತ್ತಾರೆ. ಆದ್ದರಿಂದ ಸದರಿ ಸಾಕ್ಷಿದಾರರಿಂದ ಅಭಿಯೋಜನೆಗೆ ಯಾವುದೇ ಅನುಕೂಲವಾಗಿರುವುದಿಲ್ಲ.

**17.** ಪ್ರಾ.ಸಾ-6 ನಂಜುಂಡ ರವರು ಮಹಜರ್ ಸಾಕ್ಷಿದಾರರಾಗಿರುತ್ತಾರೆ. ಸದರಿ ಸಾಕ್ಷಿದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಆರೋಪಿತ ಗೊತ್ತಿಲ್ಲ, ಚಾಸಾ-1 ರಿಂದ ಚಾಸಾ-9, ಚಾಸಾ-11

ರಿಂದ ಚಾಸಾ-14 ಗೊತ್ತಿಲ್ಲ. ನಿಪಿ.5 ಮತ್ತು ನಿಪಿ.6 ಕ್ಕೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ನಿಪಿ.5 ಮತ್ತು ನಿಪಿ.6 ರಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಮಹಜರ್ ಕ್ರಮ ಜರುಗಿಸಿ ಯಾವುದೇ ವಸ್ತುಗಳನ್ನು ಅಮಾನತುಪಡಿಸಿಕೊಂಡಿಲ್ಲ ಎಂದು ಸಾಕ್ಷ್ಯ ನುಡಿದಿದ್ದು, ತಮ್ಮ ದೂರಿನ ಅಂಶವನ್ನು ಅಲ್ಲಗಳೆದಿರುತ್ತಾರೆ. ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಲು ಕೇಳಿಕೊಂಡು, ಪಾಟೀ ಸವಾಲಿಗೆ ಒಳ ಪಡಿಸಿರುತ್ತಾರೆ. ಪಾಟೀ ಸವಾಲಿನಲ್ಲಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಮಹಜರ್ ಬಗ್ಗೆ ಕೇಳಿರುತ್ತಾರೆ, ಅದಕ್ಕೆ ಸದರಿ ಸಾಕ್ಷಿದಾರರು ತಮ್ಮ ಹೇಳಿಕೆಯನ್ನು ಅಲ್ಲಗಳೆದಿರುತ್ತಾರೆ. ಆದ್ದರಿಂದ ಸದರಿ ಸಾಕ್ಷಿದಾರರಿಂದ ಅಭಿಯೋಜನೆಗೆ ಯಾವುದೇ ಅನುಕೂಲವಾಗಿರುವುದಿಲ್ಲ.

**18.** ಪ್ರಾ.ಸಾ-7 ಪ್ರಕಾಶ್ ರವರು ಪ್ರಕರಣ ವರದಿ ದಾಖಲು ಮಾಡಿದವರಾಗಿರುತ್ತಾರೆ. ಸದರಿ ಸಾಕ್ಷಿದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿನಾಂಕ 16.05.2024 ರಂದು ಕನಕಪುರ ಗ್ರಾಮಾಂತರ ಠಾಣೆಯಲ್ಲಿ ಕರ್ತವ್ಯದಲ್ಲಿದ್ದಾಗ ಮಧ್ಯಾಹ್ನ 3.30 ಗಂಟೆಗೆ ಚಾಸಾ-1 ರವರು ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಠಾಣಾ ಮೊಕದ್ದಮೆ ಸಂಖ್ಯೆ 81/2024 ರಂತೆ ಕಲಂ. 9 ರ Child

marriage act ರೀತ್ಯಾ ಪ್ರಕರಣವನ್ನು ದಾಖಲು ಮಾಡಿ ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

ಸದರಿ ಸಾಕ್ಷಿದಾರರನ್ನು ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಿದ್ದು, ಪಾಟೀ ಸವಾಲಿನಲ್ಲಿ,

"... ನಾನು ಆ ದಿನ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ. ಬೆಳಿಗ್ಗೆ 8 ರಿಂದ ರಾತ್ರಿ 8 ರವರೆಗೆ ನಾನು ಠಾಣಾ ಪ್ರಭಾರದಲ್ಲಿದ್ದೆ. CDPO ನಾರಾಯಣಸ್ವಾಮಿಯವರು ದೂರನ್ನು ದಾಖಲಿಸಿದ್ದರು. ಅವರು ಕೇವಲ ದೂರನ್ನು ಮಾತ್ರ ಸಲ್ಲಿಸಿದ್ದರು, ಯಾವುದೇ ದಾಖಲೆ ನೀಡಿರಲಿಲ್ಲ. ಚಾಸಾ-1 ರವರು ಯಾವುದೇ ದೂರು ನೀಡಿಲ್ಲ, ಠಾಣಾ ಅಂಕಿ ಅಂಶಕ್ಕೋಸ್ಕರ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎನ್ನುವುದನ್ನು ಅಲ್ಲಗಳೆದಿರುತ್ತಾರೆ. ..."

**19.** ಪ್ರಾ.ಸಾ-8 ಲೀಲಾ ರವರು ಸಂತ್ರಸ್ಥೆಯ ಬಗ್ಗೆ ಮಾಹಿತಿ ನೀಡಿದವರಾಗಿರುತ್ತಾರೆ. ಸದರಿ ಸಾಕ್ಷಿದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಈ ಪ್ರಕರಣದಲ್ಲಿ ನಾನು ಚಾಸಾ-14 ರವರು ನಮ್ಮ ಶಾಲೆಗೆ ಬಂದು ದೇವಿಕಾ ಎನ್ನುವ ಮಗು ನಿಮ್ಮ ಶಾಲೆಯಲ್ಲಿ ಓದುತ್ತಿತ್ತಾ ಎಂದು ಕೇಳಿರುತ್ತಾರೆ, ನಾನು ಸದರಿ ಮಗು ಇಲ್ಲಿ ಓದುತ್ತಿತ್ತು ಎಂದು ಹೇಳಿರುತ್ತೇನೆ. ಚಾಸಾ-14 ರವರು ಸದರಿ ಮಗು

ಇಲ್ಲಿ ಓದುತ್ತಿದ್ದ ಬಗ್ಗೆ ವ್ಯಾಸಂಗ ಪ್ರಮಾಣ ಪತ್ರವನ್ನು ನೀಡಲು ಕೋರಿರುತ್ತಾರೆ. ಸದರಿ ದಿನ ಮುಖ್ಯ ಶಿಕ್ಷಕರು ಇಲ್ಲದೇ ಇರುವ ಕಾರಣ ನಾನು ಸದರಿ ವ್ಯಾಸಂಗ ಪ್ರಮಾಣ ಪತ್ರವನ್ನು ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

ಸದರಿ ಸಾಕ್ಷಿದಾರರನ್ನು ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಿದ್ದು, ಪಾಟೀ ಸವಾಲಿನಲ್ಲಿ,

"... ನಾನು ಶಾಲೆಯಲ್ಲಿದ್ದಾಗ ಯಾರು ಬಂದಿದ್ದರು ಎಂಬ ಪ್ರಶ್ನೆಗೆ ಸಾಕ್ಷಿದಾರರು ಪೋಲಿಸರು ಬಂದಿದ್ದರು, ಅವರು ಯಾರು ಎಂದು ನನಗೆ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಪೋಲಿಸ್ ರವರು ಮನವಿಯನ್ನು ಯಾವ ರೀತಿ ಕೇಳಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ಅವರು ಮೌಖಿಕವಾಗಿ ಕೇಳಿರುತ್ತಾರೆ, ನಾವು ಬರವಣಿಗೆಯಲ್ಲಿ ಕೇಳಿದಾಗ ಪೋಲಿಸರು ಬರವಣಿಗೆಯಲ್ಲಿ ಕೊಟ್ಟಿರುತ್ತಾರೆ ಅದನ್ನು ನಾನು ಈ ದಿನ ನ್ಯಾಯಾಲಯಕ್ಕೆ ತಂದಿರುವುದಾಗಿ ಸಾಕ್ಷಿದಾರರು ನುಡಿಯುತ್ತಾರೆ. ಸದರಿ ದಾಖಲೆಯನ್ನು ಸಾಕ್ಷಿದಾರರು ಈ ದಿನ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ. ಸದರಿ ದಾಖಲೆಯನ್ನು ನಿಪಿ-10 ಎಂದು ಗುರುತಿಸಲಾಯಿತು. ನೀವು ಸದರಿ ದಿನ ನೀಡಿರುವ ದಾಖಲೆ ವ್ಯಾಸಂಗ ಪ್ರಮಾಣ ಪತ್ರ ಆಗಿದ್ದು ಜನ್ಮ ದಿನಕ್ಕೆ ಸಂಬಂಧಪಟ್ಟಿದ್ದು ಆಗಿರುವುದಿಲ್ಲ ಎಂದರೆ ಸರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ..."

**20.** ಪ್ರಾ.ಸಾ-9 ಸುದರ್ಶನ್ ಕುಮಾರ್ ರವರು ತನಿಖಾಧಿಕಾರಿಯಾಗಿರುತ್ತಾರೆ. ಸದರಿ ಸಾಕ್ಷಿದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿನಾಂಕ 08.07.2024 ರಂದು ಕನಕಪುರ

ಗ್ರಾಮಾಂತರ ಠಾಣೆ ಪ್ರಕರಣ ಸಂಖ್ಯೆ 81/2024 ರಲ್ಲಿ ಸಂತ್ರಸ್ಥೆ ದೇವಿಕಾ ವೀರೇಗೌಡರವರ ವ್ಯಾಸಂಗ ಪ್ರಮಾಣ ಪತ್ರವನ್ನು ತರಲು ಚಾಸಾ-14 ರವರು ಆದೇಶ ಮಾಡಿದ್ದು, ಆ ಆದೇಶದ ಪ್ರಕಾರ ನಾನು ಅದೇ ದಿನ ಜಯನಗರದ ಎಂ.ಇ.ಎಸ್. ಶಾಲೆಯ ಮುಖ್ಯೋಪಾಧ್ಯಾಯರನ್ನು ಭೇಟಿಯಾಗಿ ಸಂತ್ರಸ್ಥೆಯ ವ್ಯಾಸಂಗ ಪ್ರಮಾಣ ಪತ್ರವನ್ನು ಪಡೆದು ಠಾಣೆಗೆ ತಂದು ಹಾಜರುಪಡಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

ಸದರಿ ಸಾಕ್ಷಿದಾರರನ್ನು ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಿದ್ದು, ಪಾಟೀ ಸವಾಲಿನಲ್ಲಿ,

"... ಯಾರ ಆದೇಶದ ಮೇಲೆ ವ್ಯಾಸಂಗ ಪ್ರಮಾಣ ಪತ್ರವನ್ನು ತರಲು ಹೋಗಿದ್ದೀರಿ ಎಂದರೆ ಸಾಕ್ಷಿದಾರರು ಚಾಸಾ-14 ರವರ ಆದೇಶದ ಮೇರೆಗೆ ಎಂದು ನುಡಿಯುತ್ತಾರೆ. ಚಾಸಾ-14 ರವರು ನನಗೆ ಮೌಖಿಕವಾಗಿ ಆದೇಶವನ್ನು ಮಾಡಿದ್ದು, ಶಾಲೆಯ ಮುಖ್ಯೋಪಾಧ್ಯಾಯರಿಗೆ ಲಿಖಿತ ರೂಪದಲ್ಲಿ ಮನವಿ ಕೊಟ್ಟಿರುತ್ತಾರೆ. ನೀವು ಸದರಿ ದಿನ ಎಂ.ಇ.ಎಸ್. ಶಾಲೆಯ ಮುಖ್ಯೋಪಾಧ್ಯಾಯರನ್ನು ಭೇಟಿ ಮಾಡಲು ಹೋಗಿರುವುದಿಲ್ಲ, ಯಾವುದೇ ವ್ಯಾಸಂಗ ಪ್ರಮಾಣ ಪತ್ರವನ್ನು ತಂದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-14 ರವರ ಮಾತು ಕೇಳಿ ನೀವು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎನ್ನುವುದನ್ನು ಅಲ್ಲಗಳೆದಿರುತ್ತಾರೆ. ..."

**21.** ನ್ಯಾಯಾಲಯವು ಪ್ರಾಸಾ-1 ರಿಂದ ಪ್ರಾಸಾ-9 ರವರ ಸಾಕ್ಷ್ಯವನ್ನು ಪರಿಶೀಲಿಸಿ ಪರಿಗಣಿಸಿ ನೋಡಿದಾಗ ಆರೋಪಿಯ ವಿರುದ್ದ ಮಾಡಿದ ಆರೋಪಣೆಯನ್ನು ಸಾಬೀತು ಪಡಿಸಲು ಅಭಿಯೋಜನೆಯು ಸಂಪೂರ್ಣವಾಗಿ ವಿಫಲವಾಗಿರುವುದು ಕಂಡುಬರುತ್ತದೆ. ಅಭಿಯೋಜನೆಯು ಪ್ರಕರಣದ ದೂರುದಾರರಾದ ಚಾಸಾ-1 ರವರನ್ನು ಪ್ರಾಸಾ-1 ಎಂದು ವಿಚಾರಣೆಗೆ ಒಳಪಡಿಸಿದ್ದು, ಚಾಸಾ-1 ರವರು ದೂರುದಾರರಾಗಿದ್ದು, ತಮಗೆ ದಿನಾಂಕಃ 14.05.2024 ರಂದು child line ನಿಂದ ಬಾಲ್ಯವಿವಾಹವಾದ ಕುರಿತು ಮಾಹಿತಿ ಬಂದಿದ್ದು ಹಾಗೂ whatsapp ಮೂಲಕ ಮದುವೆ ಫೋಟೋ ಹಾಗೂ ಹುಡುಗಿಯ ಆಧಾರ್ ಕಾರ್ಡ್ ತಲುಪಿದ್ದು ಅದನ್ನು ಪರಿಶೀಲಿಸಿ, ಆ ಪ್ರಕಾರ ಪೊಲೀಸರಿಗೆ ದೂರು ನೀಡಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಆದರೆ ನ್ಯಾಯಾಲಯಕ್ಕೆ ಹಾಜರಾದಾಗ ಅಪ್ರಾಪ್ತ ಬಾಲಕಿ ಪ್ರಾಸಾ-2 ರವರು ತಮ್ಮ ವಿಚಾರಣೆ ವೇಳೆ ಆರೋಪಿಯೊಂದಿಗೆ ಮದುವೆ ಆಗಿರುವುದನ್ನು ಅಲ್ಲಗಳೆದಿರುತ್ತಾರೆ ಹಾಗೂ ಅಪ್ರಾಪ್ತ ಬಾಲಕಿಯ ಆಧಾರ್ ಕಾರ್ಡ್ ನ್ನು ಪ್ರಾಸಾ-1 ರವರು ಹಾಜರುಪಡಿಸಿರುವುದಿಲ್ಲ. ಪ್ರಾಸಾ-3 ರವರು ಪ್ರಾಸಾ-2 ರವರ ತಾಯಿಯಾಗಿದ್ದು ತಮಗೆ ಆರೋಪಿಯ ಪರಿಚಯ ಇಲ್ಲವೆಂದು ಹಾಗೂ ಆರೋಪಿಯು ಪ್ರಾಸಾ-2 ರವರನ್ನು ಮದುವೆ ಆಗಿರುವ ವಿಚಾರವನ್ನು ಅಲ್ಲಗಳೆದಿದ್ದು, ಪ್ರಾಸಾ-4 ಹಾಗೂ ಇತರೆ

ಸಾಕ್ಷಿದಾರರಾದ ಪ್ರಾಸಾ-5, ಪ್ರಾಸಾ-6 ರವರು ಮಹಜರ್ ಸಾಕ್ಷಿಗಳಾಗಿದ್ದು ಪ್ರಕರಣದ ಬಗ್ಗೆ ತಮಗೆ ಏನು ತಿಳಿದಿಲ್ಲ, ಪೊಲೀಸರ ಹೇಳಿಕೆಯ ಮೇರೆಗೆ ಪಂಚನಾಮೆಗೆ ಸಹಿಯನ್ನು ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಪ್ರಾಸಾ-8 ರವರು ಶಾಲಾ ದಾಖಲೆಯನ್ನು ಪೊಲೀಸರ ಮನವಿ ಮೇಲೆ ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಪ್ರಕರಣದಲ್ಲಿ ಆರೋಪಿಯ ವಿರುದ್ಧ ಹೊರಿಸಲಾದ ಆರೋಪವು ಸಾಬೀತುಪಡಿಸಲು ಮೂಲವಾಗಿ ಆರೋಪಿಯು ಚಾಸಾ-2 ರವರನ್ನು ಬಲವಂತವಾಗಿ ಕಾರಿನಲ್ಲಿ ಕೂರಿಸಿಕೊಂಡು ದಿನಾಂಕಃ 29.04.2024 ರಂದು ಚನ್ನಪಟ್ಟಣದ ಲಾಳಘಟ್ಟದ ಮಾಸ್ತಮ್ಮ ದೇವಸ್ಥಾನದಲ್ಲಿ ಮದುವೆಯಾಗಿರುವುದು ಸಾಬೀತುಪಡಿಸಬೇಕಾಗಿರುತ್ತದೆ. ಆದರೆ ಪ್ರಾಸಾ-2 ರವರು ತನಗೆ ಆರೋಪಿಯ ಜೊತೆ ಮದುವೆ ಆಗಿಲ್ಲವೆಂದು, ಪ್ರಾಸಾ-3 ರವರು ತಮ್ಮ ಮಗಳ ಜೊತೆ ಆರೋಪಿಯು ಮದುವೆ ಆಗಿಲ್ಲವೆಂದು ಸಾಕ್ಷಿ ನುಡಿಯದೆ, ಹಾಗೂ ಈ ಪ್ರಕರಣದಲ್ಲಿ ಆರೋಪಿಯು ಚಾಸಾ-1 ರವರನ್ನು ಮದುವೆ ಆಗಿರುವ ಸಂಬಂದ ಯಾವುದೇ ದಾಖಲೆಯನ್ನು ಅಭಿಯೋಜನೆಯು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಪ್ರಾಸಾ-7 ಮತ್ತು ಪ್ರಾಸಾ-9 ರವರು ತಮ್ಮ ಕಾರ್ಯ ವೈಖರಿಯ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಮೇಲ್ಕಂಡ ಸಾಕ್ಷಿದಾರರನ್ನು ವಿಚಾರಣೆಗೊಳಪಡಿಸಿದಾಗ ಅವರ ಹೇಳಿಕೆಯನ್ನು ಪರಿಶೀಲಿಸಿದಾಗ

ಅಭಿಯೋಜನೆಯು ಈ ಪ್ರಕರಣವನ್ನು ಸಾಬೀತುಪಡಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿರುವುದು ಕಂಡು ಬಂದಿರುತ್ತದೆ.

ಈ ಪ್ರಕರಣದಲ್ಲಿ ಪ್ರಮುಖವೆಂದು ಹೇಳಲಾದ ವ್ಯಕ್ತಿ ಆರೋಪಿಯ ವಿರುದ್ಧ ಯಾವುದೇ ಸಾಕ್ಷ್ಯವನ್ನು ಘಟನೆಗೆ ಪೂರಕವಾಗಿ ನುಡಿದಿರುವುದಿಲ್ಲವಾದ್ದರಿಂದ ಅಭಿಯೋಜನೆಯು ಈ ಪ್ರಕರಣದಲ್ಲಿ ಯಾವುದೇ ಹುರುಳು ಇಲ್ಲವೆಂದು ಸ್ಪಷ್ಟವಾಗಿ ಕಂಡು ಬರುತ್ತದೆ. ಆರೋಪಿಯ ವಿರುದ್ಧ ಹೊರಿಸಲಾದ ಆರೋಪಗಳು ಕೇವಲ ಆರೋಪಗಳಾಗಿಯೇ ಉಳಿಯುತ್ತವೇ ವಿನಃ ಯಾವುದೇ ಸಾಕ್ಷ್ಯಾ ಧಾರಗಳಿಂದ ರುಜುವಾತು ಆಗಿರುವುದಿಲ್ಲ.

ಆದ್ದರಿಂದ ಅಭಿಯೋಜನೆಯು ಆರೋಪಿಯ ವಿರುದ್ಧ ಆರೋಪಿಸಲಾದಂತಹ ಬಾಲ್ಯ ವಿವಾಹ ಕಾಯ್ದೆ 2006 ಕಲಂ 9 ಹಾಗೂ ಭಾರತೀಯ ದಂಡ ಸಂಹಿತೆಯ ಕಲಂ 363 ರ ಅಪರಾಧವನ್ನು ಆರೋಪಿತರು ಮಾಡಿರುತ್ತಾರೆಂದು ರುಜುವಾತು ಪಡಿಸುವಲ್ಲಿ ಅಭಿಯೋಜನೆಯು ವಿಫಲವಾಗಿದೆ ಹಾಗೂ ಅಭಿಯೋಜನೆಯು ತನ್ನೆಲ್ಲಾ ಸಂಶಯಾತೀತ ಕಾರಣಗಳಿಂದಾಗಿ ಆರೋಪಿತರ ಮೇಲಿನ ಅಪರಾಧವನ್ನು ರುಜುವಾತು ಪಡಿಸಬೇಕೆಂಬುದು ಕ್ರಿಮಿನಲ್ ನ್ಯಾಯಶಾಸ್ತ್ರದ ಸಾಮಾನ್ಯ ನಿಯಮವಾಗಿದ್ದು, ಈ ಪ್ರಕರಣದಲ್ಲಿ ಅಭಿಯೋಜನೆಯು ಆರೋಪಿಯ ವಿರುದ್ಧದ

ಆರೋಪಗಳನ್ನು ರುಜುವಾತು ಪಡಿಸುವಲ್ಲಿ ವಿಫಲವಾಗಿರುವುದರಿಂದ ಸಂಶಯದ ಲಾಭವನ್ನು ಆರೋಪಿಗೆ ಕೊಡಬೇಕಾಗಿರುವುದು ಸಾಮಾನ್ಯ ಕಾನೂನಿನ ತತ್ವವಾಗಿರುವುದರಿಂದ ಈ ಮೇಲಿನ ಅಂಶವನ್ನು **ನಕಾರಾತ್ಮಕವಾಗಿ** ಉತ್ತರಿಸಲಾಗಿದೆ.

**22.** **ಅಂಶ-2:** ಅಂಶ-1 ರಲ್ಲಿ ಹೇಳಲಾದ ಕಾರಣಗಳಿಂದಾಗಿ, ಆರೋಪಿಯ ವಿರುದ್ದ ಹೊರಿಸಲಾದ ಆರೋಪಗಳನ್ನು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತು ಪಡಿಸಲು ವಿಫಲರಾಗಿರುವ ಕಾರಣ ಆರೋಪಿಯನ್ನು ಬಿಡುಗಡೆಗೆ ಅರ್ಹರಿರುತ್ತಾರೆಂದು ಪರಿಗಣಿಸಿ, ಈ ಕೆಳಕಂಡಂತೆ ಆದೇಶ ಮಾಡುತ್ತೇನೆ.

**:ಆದೇಶ:**

**ದಂಡ ಪ್ರಕ್ರಿಯಾ ಸಂಹಿತೆ 248(1) ರಡಿಯಲ್ಲಿ ಆರೋಪಿಯನ್ನು ಬಾಲ್ಯ ವಿವಾಹ ಕಾಯ್ದೆ 2006 ಕಲಂ 9 ಹಾಗೂ ಭಾರತೀಯ ದಂಡ ಸಂಹಿತೆಯ ಕಲಂ 363 ರ ಆಪಾದನೆಗಳಿಂದ ದೋಷ ಮುಕ್ತಗೊಳಿಸಿ ಖುಲಾಸೆ ಮಾಡಲಾಗಿದೆ.**

**ಆರೋಪಿಯ ವೈಯುಕ್ತಿಕ ಬಂಧ ಪತ್ರ ಮತ್ತು**

**ಜಾಮೀನುದಾರರ ಜಾಮೀನು ಮುಚ್ಚಳಿಕೆ ಪತ್ರಗಳನ್ನು ರದ್ದು ಪಡಿಸಲಾಗಿದೆ.**

*(ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು ಗಣಕೀಕೃತಗೊಳಿಸಿರುವುದನ್ನು ಪರಿಷ್ಕರಿಸಿ, ನಂತರ ದಿನಾಂಕ **28ನೇ ಮಾರ್ಚ್ 2026** ರಂದು ತೀರ್ಪನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು).*

*ಸಹಿ/-*
**(ವಿನಯ .ವಿ. ಕುಂದಾಪುರ)**
**2ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಕನಕಪುರ.**

**::ಅನುಬಂಧ::**

**1.** ಅಭಿಯೋಜನಾ ಪರ ವಿಚಾರಣೆ ಮಾಡಲಾದ ಸಾಕ್ಷಿಗಳು:

1) ಪಿ.ಡಬ್ಲ್ಯೂ -1 : ನಾರಾಯಣ

2) ಪಿ.ಡಬ್ಲ್ಯೂ -2 : ದೇವಿಕಾ

3) ಪಿ.ಡಬ್ಲ್ಯೂ -3 : ಶಿವಲಿಂಗಮ್ಮ

4) ಪಿ.ಡಬ್ಲ್ಯೂ -4 : ವೀರೇಗೌಡ

5) ಪಿ.ಡಬ್ಲ್ಯೂ -5 : ರಘು

6) ಪಿ.ಡಬ್ಲ್ಯೂ -6 : ನಂಜುಂಡ

7) ಪಿ.ಡಬ್ಲ್ಯೂ -7 : ಪ್ರಕಾಶ್

8) ಪಿ.ಡಬ್ಲ್ಯೂ -8 : ಲೀಲಾ

9) ಪಿ.ಡಬ್ಲ್ಯೂ -9 : ಸುದರ್ಶನ್ ಕುಮಾರ್

**2.** ಅಭಿಯೋಜನಾ ಪರ ಹಾಜರು ಪಡಿಸಿದ ದಾಖಲೆಗಳುಃ

ನಿಶಾನೆ ಪಿ-1 : ದೂರು

ನಿಶಾನೆ ಪಿ-1(ಎ) : ಪ್ರಾಸಾ-1 ರವರ ಸಹಿ

ನಿಶಾನೆ ಪಿ-1(ಬಿ) : ಪ್ರಾಸಾ-7 ರವರ ಸಹಿ

ನಿಶಾನೆ ಪಿ-2 : ಪ್ರಾಸಾ-2 ರವರ ಹೇಳಿಕೆ

ನಿಶಾನೆ ಪಿ-3 : ಪ್ರಾಸಾ-3 ರವರ ಹೇಳಿಕೆ

ನಿಶಾನೆ ಪಿ-4 : ಪ್ರಾಸಾ-4 ರವರ ಹೇಳಿಕೆ

ನಿಶಾನೆ ಪಿ-5 & 6 : ಮಹಜರ್

ನಿಶಾನೆ ಪಿ-5(ಎ) & 6(ಎ): ಪ್ರಾಸಾ-5 ರವರ ಸಹಿ

ನಿಶಾನೆ ಪಿ-7 : ಪ್ರಾಸಾ-6 ರವರ ಹೇಳಿಕೆ

ನಿಶಾನೆ ಪಿ-8 : ಎಫ್ ಐ ಆರ್

ನಿಶಾನೆ ಪಿ-8(ಎ) : ಪ್ರಾಸಾ-7 ರವರ ಸಹಿ

ನಿಶಾನೆ ಪಿ-9 : ವ್ಯಾಸಂಗ ಪ್ರಮಾಣ ಪತ್ರ

ನಿಶಾನೆ ಪಿ-9(ಎ) : ಪ್ರಾಸಾ-8 ರವರ ಸಹಿ

ನಿಶಾನೆ ಪಿ-10 : ಪೊಲೀಸರ ಮನವಿ ಪತ್ರ

3. ಆರೋಪಿತರ ಪರ ವಿಚಾರಣೆ ಮಾಡಲಾದ ಸಾಕ್ಷಿಗಳುಃ

- ಇಲ್ಲಾ -

4. ಆರೋಪಿತರ ಪರ ಹಾಜರು ಪಡಿಸಿದ ದಾಖಲೆಗಳುಃ

- ಇಲ್ಲಾ -

5. ಸಾಕ್ಷಿ ಕಾಲಕ್ಕೆ ಗುರುತಿಸಲಾದ ಮುದ್ದೆಮಾಲುಗಳುಃ

- ಇಲ್ಲಾ -

ಸಹಿ/-
**(ವಿನಯ .ವಿ. ಕುಂದಾಪುರ)**
**2ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಕನಕಪುರ.**

(ಮುಕ್ತ ನ್ಯಾಯಾಲಯದಲ್ಲಿ ತೀರ್ಪನ್ನು ಪ್ರಕಟಿಸಲಾಗಿದೆ
ಪ್ರತ್ಯೇಕ ಆದೇಶದ ಹಾಳೆಯನ್ನು ವೀಕ್ಷಿಸಿ)

**:ಆದೇಶ:**

ದಂಡ ಪ್ರಕ್ರಿಯಾ ಸಂಹಿತೆ 248(1) ರಡಿಯಲ್ಲಿ ಆರೋಪಿಯನ್ನು ಬಾಲ್ಯ ವಿವಾಹ ಕಾಯ್ದೆ 2006 ಕಲಂ 9 ಹಾಗೂ ಭಾರತೀಯ ದಂಡ ಸಂಹಿತೆಯ ಕಲಂ 363 ರ ಆಪಾದನೆಗಳಿಂದ ದೋಷ ಮುಕ್ತಗೊಳಿಸಿ ಖುಲಾಸೆ ಮಾಡಲಾಗಿದೆ.

ಆರೋಪಿಯ ವೈಯುಕ್ತಿಕ ಬಂಧ ಪತ್ರ ಮತ್ತು ಜಾಮೀನುದಾರರ ಜಾಮೀನು ಮುಚ್ಚಳಿಕೆ ಪತ್ರಗಳನ್ನು ರದ್ದು ಪಡಿಸಲಾಗಿದೆ.

**2ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಕನಕಪುರ.**